ಮಲಗಿಸೋಣ ಬನ್ನಿ ಅಂದರು. ನಾವೇ ಬಾಡೀನ ಈ ಪೊಸಿಷನ್‌ನಲ್ಲಿ ಮಲಗಿಸಿದ್ವಿ' ಅನ್ನುತ್ತ ಇನ್‌ಸ್ಪೆಕ್ಟರ್ ಮುಖ ನೋಡಿದ.

'ಪ್ರೊ. ಬಲರಾಮ್ ಅವರ ಮಗ ಅರುಣ ನನ್ನ ಕ್ಲಾಸ್‌ಮೇಟ್. ಅವನು ಹೊಸ ಮನೆಗೆ ಹೋಗೋ ಮೊದಲು, ನಮ್ಮ ಮನೆಯ ಮೇಲಿನ ಭಾಗ ಖಾಲಿ ಇದೆ, ನೀನು ಬಂದಿರು ಅಂತ ಒತ್ತಾಯ ಮಾಡಿದ್ದರಿಂದ ನಾನು ಈ ಮನೆಗೆ ಬರಬೇಕಾಯಿತು. ಬಲರಾಮ್ ಅವರನ್ನು ನೀನೇ ನೋಡಿಕೊಳ್ಳಬೇಕು ಅಂತ ಅರುಣ ಹೇಳಿದ್ದ. ಅವರು ನನಗೆ ಪಾಠ ಹೇಳದಿದ್ದರೂ ಗುರು ಸಮಾನರು. ಅವರು ಬರೀ ಪ್ರೊಫೆಸರ್ ಅಷ್ಟೇ ಅಲ್ಲ, ದೊಡ್ಡ ರೈಟರ್, ವಿಚಾರವಾದಿ. ಅವರಿಗೆ ದೊಡ್ಡ ಹೆಸರಿದೆ' ಅಂತ ಹೇಳಿ ಕೆಲವು ಸೆಕೆಂಡು ಸುಮ್ಮನಿದ್ದ.

ಮತ್ತೆ ಅವನೇ, 'ಅವರು ಮನೆ ಬಿಟ್ಟು ಹೊರಗೆಲ್ಲೂ ಹೋಗ್ತಿರಲಿಲ್ಲ. ಹೇರ್ ಕಟ್ ಮಾಡೋಕೆ ಮನೆಗೇ ಒಬ್ಬ ಬರೋನು. ಅವರಿಗೆ ಬೇಕಾದ್ದನ್ನು ನಾನೇ ತಂದುಕೊಡ್ತಿದ್ದೆ. ಬೆಳಗಿನ ಹೊತ್ತಲ್ಲಿ ಮನೆ ಕಸ ಗುಡಿಸಿ ಪಾತ್ರೆ ತೊಳೆದು, ಬಟ್ಟೆ ಒಗೆದು ಕೊಡೋದಕ್ಕೆ ಒಬ್ಬ ಹುಡುಗ ಬರ್ತಾನೆ. ಅಡಿಗೆಯನ್ನು ಅವರೇ ಮಾಡಿಕೊಳ್ತಿದ್ದರು. ನಮ್ಮನೆಯಿಂದ ಊಟ ಕಳಿಸ್ತೀನಿ ಅಂತ ಒಂದ್ ಸಲ ಹೇಳಿದ್ದೆ. ಅವರೇ ನಿಮಗ್ಯಾಕೆ ತೊಂದರೆ ಬೇಡ ಅಂದಿದ್ದರು. ಹೆಚ್ಚು ಕಡಿಮೆ ದಿನಾ ಸಂಜೆ ಒಂದೆರಡು ಗಂಟೆ ನಾನು ಅವರ ಜತೆ ಕಳೀತಿದ್ದೆ. ಸಾಹಿತ್ಯ, ಸಿನಿಮಾ, ರಂಗಭೂಮಿ, ಪುಸ್ತಕಗಳ ಬಗ್ಗೆ ಏನಾದರೂ ಹೇಳ್ತಿದ್ದರು. ಅವರನ್ನು ನೋಡೋಕೆ ಯಾರೂ ಬರ್ತಿರಲಿಲ್ಲ. ನಾನು ಇಲ್ಲಿದ್ದೀನಿ ಅಂತ ಯಾರಿಗೂ ಹೇಳಬೇಡ ಅಂದಿದ್ದರು. ಇಡೀ ದಿನ ಪತ್ರಿಕೆ, ಮ್ಯಾಗಜೈನ್, ಪುಸ್ತಕಗಳನ್ನು ಓದಿಕೊಂಡೇ ಕಾಲ ಕಳೆಯೋರು. ಮನೆಯಲ್ಲೇ ಸಿನಿಮಾ ನೋಡ್ತಿದ್ದರು, ಸ್ಕೆಚಿಂಗ್ ಮಾಡೋರು. ಬೇಜಾರಾದಾಗ ಹಿಂದೂಸ್ತಾನಿ, ಸೂಫಿ ಮ್ಯೂಸಿಕ್ ಕೇಳೋರು. ಸೆಲ್ ಫೋನ್ ಇದ್ದರೂ ಬಳಸ್ತಿರಲಿಲ್ಲ. ಸಂಜೆ ಹೊತ್ತು ಅವರ ಮನೆಗೆ ಹೋಗೋದು ತಡವಾದರೆ ಫೋನ್ ಮಾಡಿ ಬೇಜಾರಾಗ್ತಿದೆ ಬಾರಯ್ಯ ಅಂತ ಕರೆಯೋರು. ನಮ್ಮ ಸುತ್ತ ಮುತ್ತ ಏನು ನಡೀತಿದೆ ಅನ್ನೋದರ ಬಗ್ಗೆ ಅವರಿಗೆ ಆಸಕ್ತಿ ಇರಲಿಲ್ಲ. ಒಂಥರ ನಿರಾಳ ಮನಃಸ್ಥಿತಿ ಬೆಳೆಸಿಕೊಂಡಿದ್ದರು! ಎಲ್ಲಾ ಇದ್ದೂ ಏನೂ ಇಲ್ಲದೋರ ಹಾಗೆ ಬದುಕೋದು ಹೇಗೆ ಅಂತ ಯಾರಾದರೂ ಕೇಳಿದರೆ ಅವರನ್ನು ತೋರಿಸಬಹುದಿತ್ತು' ಅಂತ ಹೇಳಿ ಸುಮ್ಮನಾದ.

'ಪ್ರೊ. ಬಲರಾಮ್ ಸತ್ತಿರೋದು ಇನ್ನೂ ಯಾರಿಗೂ ಗೊತ್ತಿಲ್ಲ. ಗೊತ್ತಾಗೋ ಮೊದಲು ಫಾರ್ಮಾಲಿಟಿಸ್ ಮುಗಿಸಬೇಕು. ಅವರ ಮಗನಿಗೆ ಇನ್ನೊಂದ್ಸಲ ಫೋನ್ ಮಾಡ್ರಿ...' ಅನ್ನುತ್ತ ಇನ್‌ಸ್ಪೆಕ್ಟರ್, ಗಣಪತಿ ಮುಖ ನೋಡಿದರು. 'ನೀವು ಬರೋಕೆ ಸ್ವಲ್ಪ ಮೊದಲು ಮಾಡಿದ್ದೆ ಸಾರ್, ಹೊರಟಿದ್ದೇನೆ ಅಂದಿದ್ದ. ಇನ್ನೇನು ಬರಬಹುದು. ರಾಮಕೃಷ್ಣ ಪುರಂನಿಂದ ಬರಬೇಕಲ್ಲ...' ಅನ್ನುತ್ತ ಗಣಪತಿ ಬಾಗಿಲ ಕಡೆಗೆ ನೋಡಿದ. 'ನೋಡ್ರಿ, ಮಿ. ಗಣಪತಿ, ನಾವು ಎಂಥಾ ಕಾಲದಲ್ಲಿ ಬದುಕ್ತ ಇದ್ದೀವಿ. ಒಂಟಿಯಾಗಿರೊ ಅಪ್ಪನ ಜತೆ ಇರೋಕೆ ಮಗ ಸೊಸೆ ತಯಾರಿಲ್ಲ. ಮಗನ ಮನೆಗೆ ಹೋಗಿ ಇರೋಕೆ ಈ ಅಪ್ಪ ರೆಡಿ ಇಲ್ಲ. ಅವರ ಸಮಸ್ಯೆಗಳು ಏನಿದ್ದವೊ? ಫ್ರೆಂಡ್‌ನ ಅಪ್ಪ ಅನ್ನೋ ಕಾರಣಕ್ಕೆ ನೀವು ಅವರ ಕೇರ್‌ಟೇಕರ್ ಆಗಿದ್ದೆ ಅಂತೀರಿ. ಈ ಕೇಸಲ್ಲಿ ನೀವೇ ಐ ವಿಟ್ನೆಸ್. ನೀವೇ ಡೋರ್ ತೆಗೆದು ಮನೆಯೊಳಕ್ಕೆ ಹೋಗಿದ್ದೀರಿ. ಮೂಗಲ್ಲಿ ಬ್ಲೀಡಿಂಗ್ ಆಗಿದೆ. ನಿಮ್ಮನ್ನು ಕೆಲವು ಪ್ರಶ್ನೆ ಕೇಳಬೇಕಾಗುತ್ತೆ' ಅನ್ನುತ್ತ ಅವನ ಮುಖ ನೋಡಿದರು.

'ಸಾರ್, ನನ್ಮೇಲೆ ನಿಮಗೆ ಅನುಮಾನ ಬಂದಿರಬಹುದು. ಸರ್ ಒಬ್ಬರೇ ಇರೋದಕ್ಕೆ ಏನು ಕಾರಣ ಅನ್ನೋದು ನನಗೆ ಗೊತ್ತಿಲ್ಲ. ಈ ಮನೆಗೆ ಬರೋ ಮೊದಲು ಅವರು ಬೇರೆಲ್ಲೋ ಇದ್ದರು ಅಂತ ಗೊತ್ತು. ಅರುಣನೇ ಅವರನ್ನು ಮನೆಗೆ ಕರಕೊಂಡು ಬಂದನಂತೆ. ಮೊದಲು ಅವನು ಈ ಮನೆಯಲ್ಲಿದ್ದ. ಇದನ್ನು ಅಪ್ಪನಿಗೆ ಬಿಟ್ಟುಕೊಟ್ಟು, ಈಗ ನಾನಿರೊ ಮೇಲಿನ ಭಾಗಕ್ಕೆ ಹೋಗಿದ್ದ.